ಮೈಸೂರು ವಿಭಾಗದ ಅರಣ್ಯ ಇಲಾಖೆಯಲ್ಲಿ ಅಂದಾಜು ಪಟ್ಟಿ ಸರಿಯಾಗಿ ಮಾಡದೇ ಇರುವ ಬಗ್ಗೆ

2437 (3076) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ವಿಭಾಗದ ಅರಣ್ಯ ಇಲಾಖೆಯಲ್ಲಿ ಸರಿಯಾದ ಅಂದಾಜು ಪಟ್ಟಿ ತಯಾರು ಮಾಡದೆ ಕಾರಣ ರೂ.1.95 ಕೋಟಿ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರಿಯಾದ ಅಂದಾಜು ಪಟ್ಟಿ ತಯಾರಿಸದೆ ಮತ್ತು ಅನುಮೋದಿಸಿದ ಅಧಿಕಾರಿಗಳು ಯಾರು; ನಷ್ಟದ ಬಾಬ್ತುವಿನ ವರ್ಷವಾರು ವಿವರ ಕೊಡುವುದು;

ಇ) ಈ ರೀತಿ ಉಂಟಾಗಿರುವ ನಷ್ಟವನ್ನು ವಸೂಲು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು; ಯಾರ, ಯಾರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಈ) ಎಷ್ಟು ಮೊತ್ತದ ನಷ್ಟವನ್ನು ವಸೂಲು ಮಾಡಲಾಗಿದೆ; ಈ ರೀತಿ ನಷ್ಟ ಉಂಟಾಗದಂತೆ ಸರ್ಕಾರ ಕೈಗೊಂಡ ಮುಂಜಾಗ್ರತಾ ಕ್ರಮಗಳಾವುವು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ ಸಚಿವರು):

ಅ) ಇದು ಕರ್ನಾಟಕ ಅರಣ್ಯ ಆರ್ಥಿಕ ಸಂಹಿತೆ ನಿಯಮಗಳ ಪ್ರಕಾರ ಮಹಾಲೇಖಪಾಲಕರ ಆಕ್ಷೇಪಣೆಯಲ್ಲಿರುವ ಮೊತ್ತವಾಗಿದೆ. ಈ ಮೊತ್ತ ಒಟ್ಟು 1.31 ಕೋಟಿ ರೂ.ಗಳು ಆಗಿರುತ್ತದೆ.

ಇದು ನಷ್ಟದ ಮೊತ್ತವಾಗಿರದೆ ಆಕ್ಷೇಪಣೆಯಲ್ಲಿರುವ ಮೊತ್ತವಾಗಿದೆ.

ಆ) ಇದು ಆಕ್ಷೇಪಣೆಯಲ್ಲಿರುವ ಆರ್ಥಿಕ ವೆಚ್ಚವಾಗಿದೆ. ಇದು ನಷ್ಟದ ಬಾಬ್ತು ಅಲ್ಲ.

ಆರ್ಥಿಕ ವಿಶ್ಲೇಷಣೆಯ ವರ್ಷವಾರು ವಿವರ ಮತ್ತು ಸಂಬಂಧಿಸಿದ ಅಧಿಕಾರಿಯ ವಿವರ ಈ ಕೆಳಗಿನಂತಿದೆ:–

ವರ್ಷ	ಆಕ್ಷೇಪಣಾ ಮೊತ್ತ	ಅಧಿಕಾರಿ
94–95	ರೂ.4.63 ಲಕ್ಷ	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು.
96–97	ರೂ.1.19 ಲಕ್ಷ	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು.
97–98	ರೂ.34.00 ಲಕ್ಷ	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು.
99–2000	ರೂ.57.25 ಲಕ್ಷ	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು.
2000–2001	ರೂ.34.24 ಲಕ್ಷ	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು.

ಇ) ನಷ್ಟ ಅಲ್ಲ.

ಮಹಾಲೇಖಪಾಲಕರ ಆಕ್ಷೇಪಣೆ ಬಗ್ಗೆ ವಿವರವಾದ ಪರಿಶೀಲನೆ ನಡೆಸಲಾಗುತ್ತದೆ.

ಈ) ಇದು ನಷ್ಟದ ಬಾಬ್ತು ಆಗಿರುವುದಿಲ್ಲ.

ಬನ್ನೇರಘಟ್ಟ ರಾಷ್ಟ್ರೀಯ ಉದ್ಯಾನ ವನದಲ್ಲಿ ಎಲಿಫೆಂಟ್ ಪ್ರೂಫ್ ಟ್ರೆಂಚ್ ಹೂಡೆಯುವುದು.

2438 (3077) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಎಲಿಫೆಂಟ್ ಪ್ರೂಫ್ ಟ್ರೆಂಚ್ ಹೊಡೆಸಲು ಸರಿಯಾದ ದರಪಟ್ಟಿ ನಿಗದಿಪಡಿಸದ ಕಾರಣ 1999 ರಿಂದ 2001ರ ಅವಧಿಯಲ್ಲಿ ರೂ.79.,37 ಲಕ್ಷ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ದರಪಟ್ಟಿಗಿಂತ ಹೆಚ್ಚಿನ ದರ ಪಾವತಿ ಮಾಡಲು ಕಾರಣವೇನು;

ಇ) ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಯಾರು; ಅವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ; ಅದರಿಂದ ಎಷ್ಟು ನಷ್ಟದ ಮೊತ್ತ ವಸೂಲಿ ಮಾಡಲಾಗಿದೆ;

ಈ) ಈ ರೀತಿಯ ಪ್ರಸಂಗಗಳು ಮರುಕಳಿಸದಂತೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ ಸಚಿವರು):

ಅ) ಗಮನಕ್ಕೆ ಬಂದಿದೆ.

ಆ) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಈ ಹಿಂದೆ ತೋಡಲಾಗಿರುವ (3+1)X2.00 ಮೀ. ಅಳತೆಯ ಆನೆತಡೆ ಕಂದಕಗಳು ಪರಿಣಾಮಕಾರಿಯಾಗದಿರುವುದು ಮತ್ತು
2
ಇದರಿಂದ ಹತ್ತಿರದ ಕೃಷಿ ಕ್ಷೇತ್ರ ಮತ್ತು ಮಾನವ ಪ್ರಾಣಹಾನಿಯನ್ನು ತಡೆಗಟ್ಟಲು ವಿಫಲವಾಗಿರುವುದು ಕಂಡು ಬಂದಿದೆ. ಅನೆತಡೆ ಕಂದಕಗಳನ್ನು ಪರಿಣಾಮಕಾರಿಯಾಗಿ ಮಾಡಲು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ತಮ್ಮ ಕ್ಷೇತ್ರದಲ್ಲಿನ ಅನುಭವ ಮತ್ತು ವನ್ಯ ಪ್ರಾಣಿ ನಿರ್ವಹಣೆಗಳ ಬಗ್ಗೆ ಇರುವ ಅನುಭವಗಳನ್ನು ಅಳವಡಿಸಿಕೊಂಡು (3+1.50)X2.00 ಮೀ.
2
ಅಳತೆಯ ಆನೆತಡೆ ಕಂದಕಗಳನ್ನು ತೆಗೆಸಿರುತ್ತಾರೆ. ಈ ಅಳತೆಯ ಕಂದಕಗಳು ಬೆಂಗಳೂರಿನ ಇತರೆ ಯಾವುದೇ ಆನೆ ಪ್ರದೇಶದಲ್ಲಿ ತೋಡಿರುವುದಕ್ಕಿಂತ ವಿಭಿನ್ನವಾಗಿರುತ್ತದೆ. ಈ ಕಾರಣಗಳಿಂದ ಆನೆ ಹಾವಳಿ ತಡೆಗಟ್ಟಲು ಮೇಲೆ ನಮೂದಿಸಿರುವ ಅಳತೆಯ ಆನೆತಡೆ ಕಂದಕಗಳನ್ನು ಹಿಂದಿನ ಬೆಂಗಳೂರು ವೃತ್ತದ ಎಸ್.ಎಸ್.ಆರ್. ದರಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಿದ್ದು, ಅಂದಾಜು ಪಟ್ಟಿಯ ವೆಚ್ಚವು ರೂ. 22.93 ಲಕ್ಷ ಹೆಚ್ಚುವರಿಯಾಗಿರುತ್ತದೆ. ಆದ್ದರಿಂದ ಹೆಚ್ಚುವರಿ ಹಣ ಪಾವತಿಯಾಗಿರುವುದಿಲ್ಲ.

ಇ) ಮೇಲೆ ತಿಳಿಸಿರುವಂತೆ ಯಾವುದೇ ಅಕ್ರಮಗಳು ನಡೆದಿಲ್ಲದಿರುವುದರಿಂದ ಯಾವುದೇ ಸಂಬಂಧಿಸಿದ ಅಧಿಕಾರಿಯ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಕ್ರೀಡಾ ಪಟುಗಳಿಗೆ ಮಾಸಾಶನ ನೀಡುವ ಬಗ್ಗೆ

2445 (3091) : ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಜ್ಯ ಮಟ್ಟದ, ರಾಷ್ಟ್ರಮಟ್ಟದ ಕ್ರೀಡಾಪಟುಗಳ ಸಂಖ್ಯೆಯೆಷ್ಟು; ವಿವಿಧ ಕ್ರೀಡೆಗಳು ಸೇರಿ ಜಿಲ್ಲಾವಾರು ವಿವರ ನೀಡುವುದು.

ಆ) ರಾಜ್ಯ ಮಟ್ಟದ ಹಾಗೂ ರಾಷ್ಟ್ರಮಟ್ಟದ ಕ್ರೀಡಾಪಟುಗಳಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ನೀಡುವ ಮಾಸಾಶನವೇಷ್ಟು; ಎಷ್ಟು ಜನ ಕ್ರೀಡಾ ಪಟುಗಳು ಮಾಸಾಶನ